O.S. No103/2022 – –

PW – 1

ದಿನಾಂಕಃ 04.07.2026 ರಂದು ಸಾಕ್ಷಿಗೆ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ 1 and 5 to 9 ಪ್ರತಿವಾದಿ ಪರ ವಕೀಲರಿಂದ –

ನಾನು 10 ನೇ ತರಗತಿವರೆಗೆ ವ್ಯಾಸಂಗ ಮಾಡಿರುತ್ತೇನೆ. ಕನ್ನಡ ಓದಲು ಬರೆಯಲು ಬರುತ್ತದೆ. ಈ ದಾವೆ ಸಲ್ಲಿಸಲು ನಮ್ಮ ವಕೀಲರಿಗೆ ನಾನೇ ಮಾಹಿತಿ ನೀಡಿರುತ್ತೇನೆ. ನ್ಯಾಯಾಲಯಕ್ಕೆ ಸಲ್ಲಿಸುವ ದಾಖಲಾತಿಗಳ ಬಗ್ಗೆ ಮಾಹಿತಿ ಇದೆ. ವಂಶ ವೃಕ್ಷ, ಪಹಣಿ, ಪಾಲು ವಿಭಾಗ ಪತ್ರ, ಮನೆ ಡಿಎಂ ಪಿ ಪತ್ರ, 2 ಕ್ರಯಪತ್ರ ಹಾಜರುಪಡಿಸಿರುತ್ತೇನೆ. ನಿಪಿ–1 ದಾಖಲಾತಿಯನ್ನು ಈ ದಾವೆಯಲ್ಲಿ ಹಾಜರುಪಡಿಸಲು ತಯಾರು ಮಾಡಿಸಿ ಹಾಜರುಪಡಿಸಿರುತ್ತೇನೆ. ನಿಪಿ–1 ನ್ನು ತಯಾರು ಮಾಡುವ ಪೂರ್ವದಲ್ಲಿ ಸದರಿ ವಿಚಾರ ನನ್ನ ಅಕ್ಕ ತಂಗಿಯರಿಗೆ ತಿಳಿಸಿರುತ್ತೇನೆ. 2021 ರಲ್ಲಿ ಕೇಳಿರುತ್ತೇನೆ. ದೊಗ್ಗಳ್ಳಿ ಶಿವಪ್ಪನ ಅಜ್ಜನ ಹೆಸರು ಬಸಪ್ಪ. ಸದರಿ ಬಸಪ್ಪನಿಗೆ ಎಷ್ಟು ಜನ ಮಕ್ಕಳೆಂದು ಗೊತ್ತಿಲ್ಲ. ಬಸಪ್ಪನ ಹೆಂಡತಿ ಹೆಸರು ನೆನಪಿಲ್ಲ. ಬಸಪ್ಪ ರವರು ಯಾವ ವರುಷ ತೀರಿ ಹೋದರು ಎಂದು ನನಗೆ ಗೊತ್ತಿಲ್ಲ. ಬಸಪ್ಪನ ಹೆಂಡತಿ ಮರಣ ಹೊಂದಿದ ಬಗ್ಗೆ ನನಗೆ ಮಾಹಿತಿ ಇಲ್ಲ.

ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿದ ದಾಖಲೆಗಳಲ್ಲಿ ಬಸಪ್ಪ ಹಾಗೂ ಆತನ ಹೆಂಡತಿ ಬಗ್ಗೆ ಉಲ್ಲೇಖ ಇರುವುದಿಲ್ಲ. ದಾವಾ ಸ್ವತ್ತುಗಳು ಬಸಪ್ಪನವರಿಗೆ ಸೇರಿತ್ತು ಎನ್ನುವ ಬಗ್ಗೆ ದಾಖಲೆಗಳನ್ನು ಪಡೆದುಕೊಂಡಿಲ್ಲ. ಬಸಪ್ಪನಿಗೆ ಎಷ್ಟು ಜನ ಮಕ್ಕಳೆಂದು ನನಗೆ ಗೊತಿಲ್ಲ. ನನ್ನ ಮುತ್ತಾತ ಬಸಪ್ಪ ದಾವಣಗೆರೆಯಲ್ಲಿ ವಾಸವಾಗಿದ್ದರು. ದಾವಾ ಸ್ವತ್ತುಗಳಿಗೆ ಸಂಬಂದಪಟ್ಟಂತೆ ಬಸಪ್ಪನವರ ಹೆಸರಿಗಿದ್ದ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ದೊಗ್ಗಳ್ಳಿ ಶಿವಪ್ಪನ ತಂದೆ ಮುರಿಗೆಪ್ಪ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಪಡಿಸಿಲ್ಲ. ಸದರಿ ನಮ್ಮ ತಾತ ಮುರಿಗೆಪ್ಪನಿಗೆ 1 ಹೆಣ್ಣು 2 ಗಂಡು ಮಕ್ಕಳು. ಅವರುಗಳೆಂದರೆ ಶಿವಪ್ಪ, ಶಂಕರಪ್ಪ, ಹಿರಿಯಮ್ಮ. ದಾವಾ ಸ್ವತ್ತುಗಳು ಮುರಿಗೆಪ್ಪನಿಗೆ ಸೇರಿದ್ದವು ಎನ್ನುವ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ.

ದಾವಾ ಸ್ವತ್ತುಗಳು ಮುರಿಗೆಪ್ಪನ ಹೆಸರಿನಲ್ಲಿ ಇದ್ದ ಬಗ್ಗೆ ನಾನು ರೆವಿನ್ಯೂ ದಾಖಲೆಗಳನ್ನು ಪರಿಶೀಲಿಸಿಲ್ಲ. ದಾವಾ ಸ್ವತ್ತುಗಳನ್ನು ನಮ್ಮ ತಂದೆ ದುಡಿದು ಸಂಪಾದನೆ ಮಾಡಿರುತ್ತಾರೆ. ಯಾವ ಸಾಲಿನಲ್ಲಿ ಸಂಪಾದನೆ ಮಾಡಿ ಖರೀದಿಸಿದ್ದಾರೆಂದು ನನಗೆ ಗೊತ್ತಿಲ್ಲ. ನಿಪಿ–4 ರಲ್ಲಿ ರುವ ಸ್ವತ್ತು ನನ್ನ ತಂದೆಯ ಹೆಸರಿನಲ್ಲಿತ್ತು ಎನ್ನುವ ಬಗ್ಗೆ ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ನಿಪಿ–5 ರಲ್ಲಿ ರುವ ಸ್ವತ್ತು ನನ್ನ ತಂದೆಯ ಹೆಸರಿನಲ್ಲಿತ್ತು ಎನ್ನುವ ಬಗ್ಗೆ ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ನಿಪಿ–6 ರಲ್ಲಿ ರುವ ಸ್ವತ್ತು ನನ್ನ ತಂದೆಯ ಹೆಸರಿನಲ್ಲಿತ್ತು ಎನ್ನುವ ಬಗ್ಗೆ ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ.

ನಿಪಿ–4 ರಿಂದ 6 ಸವ್ತುಗಳು ನಮ್ಮ ತಂದೆಯ ತಂದೆ ಹೆಸರಿನಲ್ಲಿ ಇದ್ದ ಬಗ್ಗೆ ಸಹ ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ದೊಗ್ಗಳ್ಳಿ ಶಿವಪ್ಪ ಪೌತಿಯಾಗುವ ಕಾಲಕ್ಕೆ ನಾನು ಜನಿಸಿದ್ದೆನು. ಹಾಗೂ ನಿಪಿ–1 ರ

ಪ್ರಕಾರ ಮಲ್ಲಪ್ಪ ಮತ್ತು ಜಯಲಕ್ಷ್ಮಿ ಮರಣ ಹೊಂದಿದ್ದರು. ದೊಗ್ಗಳ್ಳಿ ಶಿವಪ್ಪನ ಹೆಂಡತಿ ಬಸಮ್ಮ 2004-05 ರಲ್ಲಿ ಮರಣ ಹೊಂದಿದ್ದರು. ನಮ್ಮ ತಾಯಿ ಪೌತಿಯಾದ ಕಾಲಕ್ಕೆ ನಾವುಗೆಳಲ್ಲರು ಮದುವೆಯಾಗಿದ್ದೆವು. ಮದುವಯಾದ ನಂತರ ನಾವು ಹೆಣ್ಣು ಮಕ್ಕಳು ನಮ್ಮ ಗಂಡನ ಮನೆಯಲ್ಲಿ ಪ್ರತ್ಯೇಕವಾಗಿ ವಾಸವಗಿದ್ದೆವು ಎಂದರೆ ಸರಿ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ನೀಡಲಾಯಿತು.
(ಬಹಿರಂಗ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ.ಸ.ಸ.ಇದೆ.

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿಜೆಎಂ
ನ್ಯಾಯಾಲಯ, ದಾವಣಗೆರೆ